# ಬಿಡುಗಡೆ

ಚಂದ್ರಕಾಂತ ವಡ್ಡು

ಕಲೆ: ಆದಿತ್ಯ ಸದಾಶಿವ್

ಅವರು ತಮ್ಮನ್ನು ತಾವು ಏನೆಂದೂ ಕರೆದುಕೊಂಡವರಲ್ಲ; ಅವರಿಗೆ ತಾವು ವಿರಾಗಿಗಳೋ, ತಲೆಕೆಟ್ಟ ತಿರುಕರೋ ಎಂದು ತಿಳಿದುಕೊಳ್ಳುವ ಅಗತ್ಯವಾಗಲೀ, ಆಸಕ್ತಿಯಾಗಲೀ ಇರಲಿಲ್ಲ. ಮೇಲಾಗಿ ಅವರಿಗೆ ಅದನ್ನು ತಿಳಿದುಕೊಂಡು ಏನು ಆಗಬೇಕಿತ್ತು? ತೊಟ್ಟ ಬಟ್ಟೆಗಳಿಗೆ ಕೆಬ್ಬಣಕಲ್ಲುಗಳ ದೂಳು ಮೆತ್ತಿಕೊಂಡು ಅವರ ವ್ಯಕ್ತಿತ್ವದಲ್ಲಿ ತಂತಾನೇ ಕಾವಿ ಬಣ್ಣ ಕಾಣಿಸಿಕೊಂಡಿತ್ತೇ ಹೊರತು, ಅದಕ್ಕೆ ಬಹುದೊಡ್ಡ ಆಧ್ಯಾತ್ಮಿಕ ಮಹತ್ವವಾಗಲೀ, ವೈರಾಗ್ಯದ ಸಂಕೇತವಾಗಲೀ ಇರಲಿಲ್ಲ. ಮೈಮೇಲಿನ ಬೂದಿ ಕೂಡ ತಾವಾಗಿಯೇ ಉದ್ದೇಶಪೂರ್ವಕವಾಗಿ ಬಳಿದುಕೊಂಡಿದ್ದಲ್ಲ; ಕಾರ್ತಿಕೇಯ ಗುಡಿಯೆದುರಿಗಿನ ವಿಭೂತಿ ಗುಡ್ಡದಲ್ಲಿ ನಡೆದಾಡಿದ್ದರ ಪರಿಣಾಮವಷ್ಟೇ.

ಅಲ್ಲಿನ ಬೆಟ್ಟಗುಡ್ಡಗಳ ನಡುವಿನ ಕವಲುದಾರಿಗಳಲ್ಲಿ ಹಗಲುರಾತ್ರಿಗಳ ಪರಿವೆಯಿಲ್ಲದೆ ಒಬ್ಬೊಂಟಿಯಾಗಿ ನಡೆದಾಡುವ ಈ ಬವಾಜಿಗಳು ನೋಡುಗರ ವಯೋಮಾನ, ದೃಷ್ಟಿಕೋನ, ಕುತೂಹಲ, ಊಹೆ, ಲೆಕ್ಕಾಚಾರಕ್ಕೆ ತಕ್ಕಂತೆ ಗೋಚರಿಸುತ್ತಿದ್ದರು: ಮಕ್ಕಳ ಪಾಲಿಗೆ ಹಿಮಾಲಯದ ಯೇತಿಗಳ ಪ್ರತಿರೂಪ, ತಮ್ಮನ್ನು ಹಿಡಿದೊಯ್ದು ಬಲಿ ಕೊಡುವ ಮಾಂತ್ರಿಕರು ಕೂಡ. ಅವರು ಹೊಂದಿರಬಹುದಾದ ಮಾದಕ ವಸ್ತುಗಳ ಮೇಲೆ ಯುವಕರ ನಿಗಾ. ದೊಡ್ಡವರಿಗೆ ಅವರನ್ನು ಒರೆಗೆ ಹಚ್ಚಿ ಅರ್ಥ ಮಾಡಿಕೊಳ್ಳುವ ಗೋಜಲಿಗಿಂತ ಎದುರಿಗೆ ಸಿಕ್ಕಾಗ ಅಡ್ಡಬಿದ್ದು ಆಶೀರ್ವಾದ ಪಡೆಯುವುದೇ ಸರಳ ಆಯ್ಕೆ.

ಓಡಿಹೋದ ಹೆಂಡತಿಯ ಗಂಡ, ಆಸ್ತಿಗಾಗಿ ಅಣ್ಣನ ಕುತ್ತಿಗೆ ಸೀಳಿದ ತಮ್ಮ, ರೊಚ್ಚು ಹೆಚ್ಚಾದಾಗ ತಂಗಿಯ ಗಂಡನಿಗೆ ಬೆಂಕಿ ಹಚ್ಚಿದ ಭೂಪ, ನಿಧಿ ಆಶೆಗೆ ಮಗಳನ್ನೇ ಕೊಂದ ತಂದೆ... ಹೀಗೆ ಯಾರಾದರೂ ಆಗಿರಬಹುದಾದ ಅಥವಾ ಯಾರೂ ಆಗಿರದ ಬವಾಜಿಗಳು ಯಾವುದೋ ಘಳಿಗೆಯಲ್ಲಿ ಬಿಡಿಬಿಡಿಯಾಗಿ ಊರು, ಸಂಸಾರ ತೊರೆದಿರುವುದು ಖರೇ. ಆದರೆ, ಇವರೆಲ್ಲರೂ ವೇಷಭೂಷಣ, ಮಾತು, ವರ್ತನೆ, ತಿರುಗಾಟದಲ್ಲಿ ಒಂದೇ ತೆರನಾಗಿ ಕಾಣಿಸುವುದು ಮತ್ತು ವಿಂಗಡಣೆಗೆ ನಿಲುಕದಿರುವುದು ಮಾತ್ರ ಸೋಜಿಗ ತರಿಸುತ್ತದೆ. ಎಲ್ಲೂ ನೆಲೆ ನಿಲ್ಲದೆ ಅಲ್ಲಲ್ಲಿ ಕಾಣಿಸಿಕೊಂಡಂತೆಯೇ ಕತ್ತಲಲ್ಲಿ ಕರಗಿಹೋಗುತ್ತಿದ್ದ ಈ ಅಲೆಮಾರಿಗಳ ನಡುವೆ ಅಪವಾದವೆಂದರೆ ಭೈರಪ್ಪ ತಾತ.

ಅದು ಒಡಲು ತುಂಬಿಕೊಂಡ ಕಬ್ಬಿಣದ ಅದಿರು ಮರೆಮಾಚಲು ಮೈಮೇಲೆ ಹಸಿರು ಹೊದ್ದು ನಿಗೂಢವಾಗಿ ಮಲಗಿದ ಗುಡ್ಡ. ಅದರ ತುತ್ತತುದಿಯಲ್ಲೇ ನೆಲೆ ಕಂಡುಕೊಂಡ ತಾತ ದಿನಗಳೆದಂತೆ ಊರವರ ಭಕ್ತಿ, ಭಯ, ನೆಮ್ಮದಿಗೆ ಊರುಗೋಲಾಗಿದ್ದ. ದಟ್ಟ ಅಡವಿಯನ್ನೇ ವಾಸಕ್ಕೆ ಆಯ್ಕೆ ಮಾಡಿಕೊಂಡ ತಾತ ಕಾಡುಪ್ರಾಣಿಗಳಿಗೆ ಅಂಜಲು ಕಾರಣವಿರಲಿಲ್ಲ.

ಆತನೇ ನೀಡಿದ ಮಾಹಿತಿಯಂತೆ ರಾತ್ರಿ ಹುಲಿಗಳು ನೀರು ಕುಡಿಯಲು ಪೊಟರೆ ಎದುರಿನ